**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು**

**ಸಿ.ಸಿ. ನಂ.706/2017**

**ಸಿ.ಡಬ್ಲೂ-3 ಪಿ.ಡಬ್ಲೂ-3**

**ದಿಃ 19.06.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರಾಜೇಗೌಡ |
| ಗಂಡ/ತಂದೆಯ ಹೆಸರು | ಚನ್ನೇಗೌಡ |
| ವಯಸ್ಸು | ಸುಮಾರು 61 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಸಿಂಡೆನಹಳ್ಳಿ ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ನನ್ನ ನಾದಿನಿ. ಚಾಸಾ-2 ನನ್ನ ತಮ್ಮ. ಚಾಸಾ-4 ಮತ್ತು 5 ಗೊತ್ತು. ಚಾಸಾ-6 ನನ್ನ ತಮ್ಮ, ಮೃತಪಟ್ಟಿರುತ್ತಾರೆ. ಆರೋಪಿತರು ಹಾಗೂ ಚಾಸಾ-1 ರವರ ನಡುವೆಯಾದ ಗಲಾಟೆಯ ವಿಚಾರ ನನಗೆ ಗೊತ್ತಿಲ್ಲ. ಆರೋಪಿತರು ಅಕ್ರಮ ತಡೆಯನ್ನುಂಟು ಮಾಡಿಲ್ಲ. ಹಲ್ಲೆ ಮಾಡಿಲ್ಲ. ಚಾಸಾ-1 ರವರ ಮಾನಕ್ಕೆ ಚ್ಯುತಿ ಬರುವ ಹಾಗೆ ವರ್ತಿಸಿಲ್ಲ. ಅವಾಚ್ಯವಾಗಿ ನಿಂದಿಸಿರುವುದಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ಎರಡು ದೊಣ್ಣೆಗಳನ್ನು ಹಾಗೂ ರವಿಕೆಯನ್ನು ಇಂದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

<u>(ಈ ಹಂತದಲ್ಲಿ ಸಾಕ್ಷಿ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)</u>

<u>ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಿಮ್ಮ ಊರಿನ ಜವರೇಗೌಡರ ಹೆಸರಿನಲ್ಲಿ 15 ಎಕರೆ ಜಮೀನು

ಇದೆ ಎಂದರೆ ಸರಿ. ಜಮೀನನ್ನು ಜವರೇಗೌಡರೇ ವ್ಯವಸಾಯ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ಜಮೀನಿನ ಪೈಕಿ ಚಾಸಾ-2 ರವರು 1 ಎಕರೆ ಜಮೀನನ್ನು ಹಾಗೂ 2ನೇ ಆರೋಪಿಗೆ 2 ಎಕರೆ ಜಮೀನನ್ನು ವ್ಯವಸಾಯ ಮಾಡುವಂತೆ ಬಿಟ್ಟಿರುತ್ತಾರೆಂದರೆ ಸರಿ. ಆ ಜಮೀನಿನ ವಿಚಾರದಲ್ಲಿ ಚಾಸಾ-2 ಹಾಗೂ 2ನೇ ಆರೋಪಿಗೆ ಆಗಾಗ ಗಲಾಟೆ ನಡೆಯುತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಿಃ 11.08.2017 ರಂದು ಬೆಳಿಗ್ಗೆ 11-00 ಗಂಟೆಗೆ ಚಾಸಾ-2 ಜಮೀನಿನಲ್ಲಿ ಬೆಳೆದಿದ್ದ ಜೋಳದ ಕಡ್ಡಿಗಳನ್ನು ಕೊಯ್ಯುತ್ತಿದ್ದಾಗ ನೀವು ಹಾಗೂ ಚಾಸಾ-4 ರವರು ಅಲ್ಲಿಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ನಂತರ ನೀವು ಹಾಗೂ ಚಾಸಾ-4, ಚಾಸಾ-2 ಹಾಗೂ 2ನೇ ಆರೋಪಿಯನ್ನು ಕರೆಯಿಸಿ, ಅವರಿಬ್ಬರ ಸಮಕ್ಷಮ ಇಬ್ಬರಿಗೂ ಸೇರಿದ ಜಮೀನನ್ನು ದಾಪುಗಾಲಿನಿಂದ ಅಳತೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ-4 ದಾಪುಗಾಲಿನಂತೆ ಅಳತೆ ಮಾಡುತ್ತಿದ್ದಾಗ, ಚಾಸಾ-1 ರವರು ದಾಪುಗಾಲಿನಿಂದ ಯಾಕೆ ಅಳತೆ ಮಾಡುತ್ತೀರಿ, ಪೈಪ್ ನಿಂದ ಅಳತೆ ಮಾಡಿ ಎಂದು ಹೇಳಿದ್ದಕ್ಕೆ, 2ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ಅದಕ್ಕೆ ಚಾಸಾ-2, ಚಾಸಾ-1 ರವರಿಗೆ ಯಾಕೆ ಬಯ್ಯುತ್ತೀಯಾ ಎಂದು ಕೇಳಲು 2ನೇ ಆರೋಪಿಯ ಬಳಿ ಹೋದಾಗ, ಅಲ್ಲೇ ಇದ್ದ 1ನೇ ಆರೋಪಿ ತನ್ನ ಕೈಯಲ್ಲಿದ್ದ ಖಾರದ ಪುಡಿಯನ್ನು ಚಾಸಾ-2 ರವರ ಕಣ್ಣಿಗೆ ಎರಚಿ, ತಡೆದರು ಎಂದರೆ ಸರಿಯಲ್ಲ. 1ನೇ ಆರೋಪಿ ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ-2 ರವರ ಎಡಮೊಣಕೈಗೆ ಹಾಗೂ ಎಡಎದೆಗೆ ಹೊಡೆದು ನೋವುಂಟುಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ತೆಂಗಿನ ಮರದ ಗೊದಮಟ್ಟೆಯಿಂದ ಚಾಸಾ-2 ರವರ ಬಲ ಪಕ್ಕೆಗೆ ಹೊಡೆದಳು ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-2 ರವರ ಬಲತೊಳಿಗೆ ಹಲ್ಲಿನಿಂದ ಕಚ್ಚಿದನು ಎಂದರೆ ಸರಿಯಲ್ಲ. ಆಗ ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ 1ನೇ ಆರೋಪಿ ಖಾರದ ಪುಡಿಯನ್ನು ಕಣ್ಣಿಗೆ ಎರಚಿ, ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಎಳೆದಾಗ, ಸರ ಕಿತ್ತುಹೋಯಿತು ಎಂದರೆ ಸರಿಯಲ್ಲ.

**1**ನೇ ಆರೋಪಿ ಮತ್ತೊಂದು ದೊಣ್ಣೆಯಿಂದ ಚಾಸಾ-**1** ರವರ ಎಡಗೈ ತೊಳಿಗೆ ಹಾಗೂ ಎಡಕಾಲಿಗೆ ಹೊಡೆದರು ಎಂದರೆ ಸರಿಯಲ್ಲ. **1**ನೇ ಆರೋಪಿ ಚಾಸಾ-**1** ರವರ ಮುಂದೆಲೆ ಹಿಡಿದು ಎಳೆದಾಡಿ, ರವಿಕೆಯನ್ನು ಹರೆದು ಹಾಕಿ, ಅಪಮಾನಪಡಿಸಿದ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-**2** ರವರನ್ನು ಗದ್ದೆಯಲ್ಲಿ ಹಾಕಿಕೊಂಡು ತುಳಿಯುತ್ತಿದ್ದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲೇ ಇದ್ದ ನೀವು ಹಾಗೂ ಚಾಸಾ-**4** ರವರು ಹೋಗಿ ಜಗಳ ಬಿಡಿಸಿ ಸಮಾಧಾನಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಆಗ **1**ನೇ ಆರೋಪಿ ಚಾಸಾ-**2** ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಚಾಸಾ-**1** ಮತ್ತು **2** ರವರು ಆಸ್ಪತ್ರೆಗೆ ಹೋಗುತ್ತೇವೆಂದು ಹೋದರು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿಃ **12.08.2017** ರಂದು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-**4** ಎಂದು ಗುರುತಿಸಲಾಯಿತು.

ಆರೋಪಿತರು ನಿಮ್ಮ ಸಂಬಂಧಿಕರು ಎಂದರೆ ಸರಿ. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ, ನಿಪಿ-**4** ರಂತೆ ಹೇಳಿಕೆ ನೀಡಿದ್ದರೂ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ವಿ.ಕೆ. ವಕೀಲರಿಂದಃ</u>

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರುವಿಚಾರಣೆ ಇಲ್ಲ</u>.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.